

# ಮೃಗತೃಷ್ಣೆ

THE MIRAGE

■ ಕೇಶವರೆಡ್ಡಿ ಹಂದ್ರಾಳ
ಕಲೆ: ಮನೋಹರ ಆಚಾರ್ಯ

## ಆತಿಥ್ಯದ ಪುಳಕ, ಸುಖದ ಸೆಳಕು

ಭಾಗ–1

ಕೊಚ್ಚಿನ್ ಇಂಟರ್ ನ್ಯಾಷನಲ್ ವಿಮಾನ ನಿಲ್ದಾಣದಲ್ಲಿ 'ವಿಸ್ತಾರ' ಕಂಪನಿಯ ವಿಮಾನದ ಗಗನಸಖಿಯಿಂದ 'ಥ್ಯಾಂಕ್ಯೂ ಫಾರ್ ಫ್ಲೈಯಿಂಗ್ ವಿಥ್ ವಿಸ್ತಾರ' ಎಂಬ ಮುಗುಳ್ನಗೆಯ ಮಾತುಗಳನ್ನು ಕಿವಿ ತುಂಬಿಕೊಂಡು ವಿಮಾನ ಇಳಿದಾಗ ಮಧ್ಯಾಹ್ನ ಮೂರೂವರೆ ಗಂಟೆಯಾಗಿತ್ತು. ವಿಮಾನ ಕಂಪನಿಗೆ ವಿಸ್ತಾರ ಎಂದು ಹೆಸರಿಟ್ಟಿರುವುದು ನಿಜಕ್ಕೂ ಅರ್ಥಗರ್ಭಿತವಾಗಿದೆ. ವಿಮಾನ ಸಂಚರಿಸುವ ಆಕಾಶದ ವಿಸ್ತಾರವನ್ನು ಅಳೆಯಲು ಯಾರಿಂದ ಸಾಧ್ಯವಾಗುತ್ತದೆ? ಅಂಥ ಬಿಸಿಯೂ ಅಲ್ಲದ, ಅಂಥ ಥಂಡಿಯೂ ಅಲ್ಲದ ಮಾಡರೇಟ್ ಉಷ್ಣಾಂಶದಿಂದಾಗಿ ವಾತಾವರಣ ತುಂಬಾ ಆಹ್ಲಾದಕರವಾಗಿತ್ತು. ಇನ್ನೇನು ವಿಮಾನ ಲ್ಯಾಂಡ್ ಆಗುತ್ತಿದೆ ಎನ್ನುವಾಗ 'ಯು ವಿಲ್ ಫೀಲ್ ಎ ಫೆಂಟಾಸ್ಟಿಕ್ ವೆದರ್ ಟುಡೇ ಅಟ್ ಕೊಚ್ಚಿನ್...' ಎಂದು ಗಗನಸಖಿ ಉಲಿದಿದ್ದು ನಿಜವೇ ಆಗಿತ್ತು. ಆದರೆ ಕಾಕಿಗಡ್ಡ ರಾಘವರೆಡ್ಡಿಯ ಮಾತುಗಳು ನೆನಪಾಗಿ ಒಂದು ರೀತಿಯ ಬೇಸರ ಮನೆ ಮಾಡಿಕೊಂಡಿತ್ತು. ನಾನಿಂದು ಕೊಚ್ಚಿನ್ ಏರ್‌ಪೋರ್ಟಿನಲ್ಲಿ ಇಳಿಯಲು ನನ್ನ ಹೈದರಾಬಾದ್ ಗೆಳೆಯ ಕಾಕಿಗಡ್ಡ ರಾಘವರೆಡ್ಡಿಯೇ ಕಾರಣವಾಗಿದ್ದದ್ದು. ಆತ ಇಂದು ನಾನು ಇಲ್ಲಿ ಇಳಿಯುವುದಕ್ಕೆ ಒಂದು ಗಂಟೆ ಮೊದಲೇ ಹೈದರಾಬಾದಿನಿಂದ ಇಲ್ಲಿಗೆ ಬಂದಿಳಿದು ನನ್ನ ಅರೈವಲ್‌ಗಾಗಿ ಕಾಯಬೇಕಿತ್ತು. ಕಳೆದ ಹದಿನೈದು ದಿನಗಳ ಹಿಂದೆಯೇ ನಮ್ಮ ಇಂದಿನ ಪ್ರಯಾಣದ ದಿನ ನಿಗದಿಯಾಗಿ ಫ್ಲೈಟ್ ಟಿಕೆಟುಗಳು ಬುಕ್ ಆಗಿದ್ದವು. ಮಧ್ಯಾಹ್ನ ಒಂದು ಗಂಟೆಗೆ ಬೆಂಗಳೂರಿನ ಕೆಂಪೇಗೌಡ ಇಂಟರ್ ನ್ಯಾಷನಲ್ ಏರ್‌ಪೋರ್ಟಿನಲ್ಲಿ ಸೆಕ್ಯೂರಿಟಿ ಚೆಕ್ ಇನ್ ಆಗಿ ಟಿಕೆಟ್ ಮೇಲೆ ನಮೂದಾಗಿದ್ದ ಗೇಟ್ ನಂಬರ್ ಹದಿನೆಂಟರ ಕಡೆ ನಡೆಯುತ್ತಿರಬೇಕಾದರೆ ಮೊಬೈಲ್ ರಿಂಗ್ ಆಗಿತ್ತು. ಜೇಬಿನಿಂದ ಮೊಬೈಲ್ ತೆಗೆದು ಕಣ್ಣಾಡಿಸಿದಾಗ ಕಾಕಿಗಡ್ಡ ರಾಘವರೆಡ್ಡಿಯ ಹೆಸರು ಡಿಸ್‌ಪ್ಲೇ ಆಗುತ್ತಿತ್ತು. ಬಹುಶಃ ರಾಘವರೆಡ್ಡಿ ಈಗಾಗಲೇ ಕೊಚ್ಚಿನ್‌ನಲ್ಲಿ ಲ್ಯಾಂಡ್ ಆಗಿರಬೇಕೆಂದು 'ಹಲೋ...' ಎಂದಿದ್ದೆ.

'ಸಾರಿ ಬ್ರದರ್, ನಮ್ಮ ಚಿಕ್ಕಮ್ಮ ಜಸ್ಟ್ ಅರ್ಧ ಗಂಟೆಯ ಹಿಂದೆ ಹಾರ್ಟ್ ಅಟ್ಯಾಕ್ ಆಗಿ ಉಸ್ಮಾನಿಯದಲ್ಲಿ ತೀರಿಹೋದ್ರು. ಏರ್‌ಪೋರ್ಟ್ ಡಿಪಾರ್ಚರ್ ಗೇಟಿನವರೆಗೂ ಬಂದು ಹಿಂದಕ್ಕೆ ಹೋಗುತ್ತಿದ್ದೇನೆ. ನಾನು ನಾಡಿದ್ದು ಬಂದು ನಿನ್ನ ಸೇರ್ಕೋತಿನಿ. ಬಟ್ ಯು ಡೋಂಟ್ ವರಿ. ಎಲ್ಲಾ ಅರೇಂಜ್ಮೆಂಟ್ಸ್ ಮಾಡಿದ್ದೀನಿ. ನಾನು ಬರೋವರ್ಗೂ ರಾಜಕುಮಾರನ ಥರ ಕಾಲ ಕಳೆಯಬಹುದು. ಡೆಫಿನೆಟ್ಲಿ ಯು ವಿಲ್ ಫೀಲ್ ದ ರಿಚ್ನೆಸ್ ಆಫ್ ಜಾಯ್. ನೀನು ಕೊಚ್ಚಿನ್‌ನಲ್ಲಿ ಲ್ಯಾಂಡ್ ಆದ ತಕ್ಷಣ ಕಾಲ್ ಮಾಡು' ಎಂದು ನನ್ನ ಉತ್ತರಕ್ಕೂ ಕಾಯದೆ ಫೋನ್ ಇಟ್ಟಿದ್ದ.

ಲಗೇಜ್ ಬ್ಯಾಗ್ ತೆಗೆದುಕೊಳ್ಳಲು ಬೆಲ್ಟ್ ನಂಬರ್ ಎರಡರ ಬಳಿ ನಡೆದವನು ರಾಘವರೆಡ್ಡಿಗೆ ಫೋನ್ ಮಾಡೋಣವೆಂದು ಜೇಬಿನಿಂದ ಫೋನ್ ತೆಗೆಯುವುದಕ್ಕೂ ಫೋನ್ ರಿಂಗಾಗುವುದರೊಂದಿಗೆ ಅವನ ಹೆಸರು ಡಿಸ್‌ಪ್ಲೇ ಆಗುವುದಕ್ಕೂ ಒಂದೇ ಆಗಿತ್ತು. ಲಗೇಜ್ ಬ್ಯಾಗಿಗಾಗಿ ತಿರುಗುವ ಬೆಲ್ಟ್ ಮೇಲೆ ಕಣ್ಣು ನೆಟ್ಟು 'ಹಲೋ..' ಎಂದಿದ್ದೆ.

'ನೀನು ಒಂದಿಷ್ಟೂ ಚಿಂತೆ ಮಾಡ್ಬೇಡ. ಅರೈವಲ್ ಗೇಟ್ ಮುಂದೆಯೇ ನಿನ್ನ ನೇಮ್ ಪ್ಲೇಟ್ ಹಿಡಿದುಕೊಂಡು ಚಂದದ ಯುವತಿಯೊಬ್ಬಳು ನಿಂತಿರುತ್ತಾಳೆ. ಜಸ್ಟ್ ಯು ಫಾಲೋ ಹರ್. ಇನ್ನು ಸಂಜೆಯವರೆಗೂ ನಾನು ಮಾತನಾಡೋಕಾಗೋದಿಲ್ಲ. ನಾಡಿದ್ದು ನಾನು ಬಂದ ಮೇಲೆ ಕೆ.ಎಮ್. ನಯ್ಯಾರರನ್ನು ಭೇಟಿ ಆಗೋಣ. ಅಲ್ಲಿಯವರೆಗೆ ಕೆ.ಎಮ್. ನಯ್ಯಾರರ ಫ್ರೆಂಡ್ ಮತ್ತು ಪರ್ಸನಲ್ ಅಡ್ವೈಸರ್ ಮಾಧವನ್ ಪಿಳ್ಳೈರವರ ಘನತರವಾದ ಆತಿಥ್ಯದಲ್ಲಿರ್ತೀಯ. ಮಾಧವನ್ ಪಿಳ್ಳೈ ತುಂಬಾ ಇಂಟರೆಸ್ಟಿಂಗ್ ಮನುಷ್ಯ...' ಎಂದು ಫೋನ್ ಇಟ್ಟವನ ಮಾತುಗಳೊಂದಿಗೆ ಅವನ ಪಕ್ಕದಲ್ಲಿ ಯಾರೋ ಜೋರಾಗಿ ಅಳುತ್ತಿರುವ ಸದ್ದೂ ಫೋನಿನಲ್ಲಿ ಕೇಳಿ ಬಂದಿತ್ತು. ಇಷ್ಟೆಲ್ಲಾ ವಿಜ್ಞಾನ, ತಂತ್ರಜ್ಞಾನ ಅಭಿವೃದ್ಧಿಯಾಗಿದ್ದರೂ ಮನುಷ್ಯನ ಗ್ರಹಿಕೆಗೆ ಸಾವಿನಿಂದಾಚೆಗಿನ ಸಂಗತಿಯ ಒಂದಿಷ್ಟು ಚಹರೆಯೂ ದಕ್ಕದೇ ಹೋದದ್ದು ಸೃಷ್ಟಿಯ ನಿಗೂಢ ವಿಸ್ಮಯವೇ ಸರಿ. ಸಾವೊಂದು ಅಲ್ಟಿಮೇಟ್ ಎಂಡ್ ಎಂದುಕೊಂಡು ಬೆಲ್ಟ್ ಮೇಲಿನ ಲಗೇಜ್ ಬ್ಯಾಗನ್ನು ಇಳಿಸಿಕೊಂಡಿದ್ದೆ. ಕಾಕಿಗಡ್ಡ ರಾಘವರೆಡ್ಡಿ ನನಗೆ ಐದು ವರ್ಷಗಳ ಹಿಂದೆ ಹೈದರಾಬಾದಿನ